ಶ್ರೀ ಪಿ.ಎಂ. ಅಶೋಕ್: ಸರ್, ಕ್ರಿಕೆಟ್ ಬಗ್ಗೆ ಮಾತನಾಡಬೇಕು. ಬಹಳ ಮುಖ್ಯವಾಗಿದೆ.

ಶ್ರೀ ಬಿ. ರಮಾನಾಥ ರೈ: ಕುಡಿಯುವ ನೀರಿನ ಸಮಸ್ಯೆ ಬಹಳ ತೀವ್ರವಾಗಿದೆ, ಅರ್ಧ ಗಂಟೆ ಚರ್ಚೆಗೆ ಅವಕಾಶವನ್ನು ಕೊಡಿ.

ಶ್ರೀ ಜಗದೀಶ್ ಶೆಟ್ಟರ್: ಬೇರೆ ರೂಪದಲ್ಲಿ ನೋಟೀಸ್ ಕೊಡಿ, ಆಗ ಆ ಬಗ್ಗೆ ಚರ್ಚೆ ಮಾಡೋಣ.

(ಗೊಂದಲ)

(ಈ ಹಂತದಲ್ಲಿ ಸದನದಲ್ಲಿ ಹಲವು ಸದಸ್ಯರು ಕ್ರಿಕೆಟ್ ಬಗ್ಗೆ ಮಾತನಾಡುವ ಬಗ್ಗೆ ಪ್ರಸ್ತಾಪಿಸುತ್ತಿದ್ದರು)

ಶ್ರೀ ಪಿ.ಎಂ. ಅಶೋಕ್: ಅಧ್ಯಕ್ಷರೆ, ಕ್ರಿಕೆಟ್ ಬಗ್ಗೆ ಬಹಳ important ಇದೆ, ಕ್ರಿಕೆಟ್ ಬಗ್ಗೆ ಸ್ವಲ್ಪ ಮಾತನಾಡಬೇಕು.

ಅಧ್ಯಕ್ಷರು: ಕ್ರಿಕೆಟ್ ಬಗ್ಗೆ ಇವತ್ತು ಮಾತನಾಡಬೇಕು ಎಂದು ಹೇಳಿದ್ದೇನೆ. ಮಾತನಾಡಿ. ಯಾರಾದರೂ ಒಬ್ಬರು ಮಾತನಾಡಿ, ಸ್ಟೇಡಿಯಂನಲ್ಲಿ ಟಿಕೆಟ್ ಕೊಡಲಿಲ್ಲ ಎಂದು ಬಹಳ ಜನ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮಾತನಾಡಿ. ನೀರಿನ ವಿಷಯವಲ್ಲ.

ಶ್ರೀ ಬಿ. ರಮಾನಾಥ ರೈ: ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾಗಿದೆ. ಚರ್ಚೆಗೆ ಅವಕಾಶ ಕೊಡಿ. ಊರಿಗೆ ಹೋಗಲಿಕ್ಕೆ ಸಾಧ್ಯವಾಗುತ್ತಿಲ್ಲ.

ಅಧ್ಯಕ್ಷರು: ನೀವು ಆ ಬಗ್ಗೆ ಪ್ರತ್ಯೇಕವಾಗಿ ಬೇರೆ ರೂಪದಲ್ಲಿ ತನ್ನಿ, ಮತ್ತೆ ಜನರಲ್ ಚರ್ಚೆ ಮಾಡಿ. ನೀವು ಪ್ರತ್ಯೇಕವಾಗಿ ಕೊಡಿ ನಾನು ಅವಕಾಶವನ್ನು ಕೊಡುತ್ತೇನೆ. ಎಲ್ಲರಿಗೂ ಸಮಸ್ಯೆ ಇದೆ, ನೀವು ಪ್ರತ್ಯೇಕವಾಗಿ ಕೊಡಿ, ಈಗ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಬಿ. ರಮಾನಾಥ ರೈ: ಇದು ಗಂಭೀರವಾದ ಸಮಸ್ಯೆಯಾಗಿದೆ, ಈ ವಿಷಯ ಯೋಗೀಶ್ ಭಟ್‌ರಿಗೂ ಗೊತ್ತಿದೆ. ಊರಿಗೆ ಹೋಗಲಿಕ್ಕೆ ಆಗುತ್ತಿಲ್ಲ. ನಮ್ಮ ಜಿಲ್ಲಾ ಪಂಚಾಯತ್ ಮೀಟಿಂಗ್‌ನಲ್ಲಿ ಇಡೀ ಅರ್ಧ ದಿವಸ ಚರ್ಚೆ ನಡೆದಿದೆ. ಆದರೂ ಸಹ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, rigid ಆಗಬೇಡಿ. ಬಹಳ rigid ಆಗುವುದಕ್ಕೆ ಹೋಗಬೇಡಿ. ನೀವು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಬಹಳ rigid ಆಗುವುದಕ್ಕೆ ಹೋಗಬೇಡಿ. ಸರ್ಕಾರ

ಏನೂ ಕೊಡುವುದಕ್ಕೆ ಆಗದೇ ಹೋದರೂ ಕುಡಿಯುವ ನೀರನ್ನು ಆದರೂ ಕೊಡಬೇಕೋ ಬೇಡವೋ? ಈಗ ಏನು ಆಗಿದೆ ಎಂದರೆ, ಈಗ ಬೇಸಿಗೆ ಬರುತ್ತಿದೆ, ಈಗ ನಾವು ಮಾರ್ಚ್ ತಿಂಗಳಲ್ಲಿ ಇದ್ದೇವೆ. ಈ ತಿಂಗಳು, ಏಪ್ರಿಲ್ ತಿಂಗಳು, ಮೇ ಹಾಗೂ ಜೂನ್‌ವರೆಗೆ ಕುಡಿಯುವ ನೀರಿನದು ದೊಡ್ಡ ಸಮಸ್ಯೆಯಾಗುತ್ತದೆ. Underground water ಕೆಳಗಡೆ ಹೋಗುತ್ತಿದೆ. ಬೋರ್‌ವೆಲ್‌ಗಳು ಬತ್ತಿಹೋಗುತ್ತಿವೆ. ನಮ್ಮ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಏನು ಮಾಡಿದ್ದಾರೆ ಎಂದರೆ, CEOಗಳ ಹತ್ತಿರ, ಜಿಲ್ಲಾಧಿಕಾರಿಗಳ ಹತ್ತಿರ, ತಾಲ್ಲೂಕು ಪಂಚಾಯಿತಿ EO ಗಳ ಹತ್ತಿರ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ, ಒಂದು ಬೋರ್‌ವೆಲ್ ಕೆಟ್ಟು ಹೋದರೂ ಕೂಡ ರಿಪೇರಿ ಮಾಡುವುದಕ್ಕೆ ಒಂದು ರೂಪಾಯಿ ಇಲ್ಲ. ಒಂದು ಬೋರ್‌ವೆಲ್ ಕೆಟ್ಟು ಹೋದರೆ immediate ಆಗಿ ತಕ್ಷಣವೇ attend ಮಾಡುವುದಕ್ಕೆ not even a rupee, either with the CEO or with the DC or with the other subordinate officers. ಪಂಚಾಯಿತಿಯಿಂದ ಅದನ್ನು ತೆಗೆದುಕೊಂಡು ಬಿಟ್ಟಿದ್ದಾರೆ. ಈಗ ಕುಡಿಯುವ ನೀರಿಗೆ ಏನು ಮಾಡಬೇಕು ಹೇಳಿ. ಈಗ ನನ್ನ ಕ್ಷೇತ್ರದಲ್ಲಿಯೇ . . . .

(ಗೊಂದಲ)

ಈಗ ದುಡ್ಡು ಅವರಿಗೆ ಕೊಟ್ಟಿದ್ದೀರಾ? ಅವರಿಗೆ ಎಲ್ಲಿಂದ ದುಡ್ಡು ಈಗ ಬಂತು? ಅವರ ಹತ್ತಿರ ಯಾವ ದುಡ್ಡು ಇದೆ ಎಂದು ಹೇಳಿ. ಯಾವ ಹೆಡ್‌ನಲ್ಲಿ ಕೊಟ್ಟಿದ್ದೀರಿ ಹೇಳಿ. ದುಡ್ಡನ್ನು ಯಾವ ಹೆಡ್‌ನಲ್ಲಿ ಕೊಟ್ಟಿದ್ದೀರಿ ಎಂದು ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: Details ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಆಯಿತು details ಕೊಡಲಿ. ಯಾವ ಹೆಡ್‌ನಲ್ಲಿ ಕೊಟ್ಟಿದ್ದಾರೆ ಹೇಳಲಿ.

ಅಧ್ಯಕ್ಷರು: ಆಯಿತು. Details ಕೊಡಲಿ.

ಶ್ರೀ ಸಿದ್ದರಾಮಯ್ಯ: ನಾನೇ ನನ್ನ ಕ್ಷೇತ್ರದಲ್ಲಿ review ಮಾಡಿದೆ. ನಾನು ಹಾಗೂ ಶ್ರೀನಿವಾಸ್ ಪ್ರಸಾದ್‌ರವರು ನಾವಿಬ್ಬರೂ ಕುಳಿತುಕೊಂಡು review ಮಾಡಿದೆವು. ಈಗ ಶ್ರೀನಿವಾಸ್‌ಪ್ರಸಾದ್ ಬಂದಿಲ್ಲ. ಒಂದು ರೂಪಾಯಿ ಇಲ್ಲ. Either with the Grama Panchayath or with the EO or with the CEO. You please check up with your CEO's. Please

check up with the CEO. ಒಂದು ರೂಪಾಯಿ ಇಲ್ಲ. ಮಹದೇವಪ್ಪನವರ ಊರಿನ ಹತ್ತಿರ ಒಂದು ಹದಿನಾರುಮೂಳೆ ಎಂದು ಊರಿದೆ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್: ಇಡೀ ರಾಜ್ಯದಲ್ಲಿ ಕುಡಿಯುವ ನೀರಿಗೆ ದುಡ್ಡಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಲಿ. ಒಂದು ಬಿಡಿಗಾಸಿಲ್ಲ.

(ಗೊಂದಲ)

ಅಧ್ಯಕ್ಷರು: ಹೀಗೆ ಎದ್ದುನಿಂತುಕೊಂಡರೆ ಹೇಗೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಾನು CEOಗೆ ಹೇಳಾಯಿತು, DCಗೆ ಹೇಳಾಯಿತು. ಮಂತ್ರಿಗಳನ್ನು ಕೇಳಿದರೆ ಸರ್ಕಾರ finance ಇಲಾಖೆಯಿಂದ ದುಡ್ಡು ಬಿಡುಗಡೆ ಮಾಡಿಲ್ಲವೆಂದು ಹೇಳುತ್ತಾರೆ. ನಿಮ್ಮ ಇಲಾಖೆಯನ್ನು ಕೇಳಿದರೆ, ಮಾನ್ಯ ಮುಖ್ಯಮಂತ್ರಿಗಳು, Finance Ministerರವರು ಕುಡಿಯುವ ನೀರಿಗೆ ದುಡ್ಡು ಬಿಡುಗಡೆ ಮಾಡಿಲ್ಲ. ನಿಮಗೂ ಹಾಗೂ ಅವರಿಗೆ ಆಗದೇ ಹೋದರೆ political ಆಗಿ ನೀವು ಏನಾದರೂ ಮಾಡಿಕೊಳ್ಳಿ. ಕುಡಿಯುವ ನೀರಿಗೋಸ್ಕರ ಜನ ಸಾಯುತ್ತಾರಲ್ಲಾ? ಮಾನ್ಯ ಮುಖ್ಯಮಂತ್ರಿಗಳೇ, ನಿಮಗೆ ಜಗದೀಶ್ ಶೆಟ್ಟರ್‌ರವರ ಮೇಲೆ ಕೋಪ ಇದ್ದರೆ ನೀವು political ಆಗಿ ಏನಾದರೂ ಬೇರೆ ವಿಚಾರ ಮಾಡಿಕೊಳ್ಳಿ. ನೀವು ಕುಡಿಯುವ ನೀರಿಗೆ ಏಕೆ ತೊಂದರೆ ಕೊಡುತ್ತಿದ್ದೀರಿ? ದುಡ್ಡನ್ನೇ ಬಿಡುಗಡೆ ಮಾಡಿಲ್ಲ. ಅವರನ್ನು ಕೇಳಿ. ನೀವು ಸತ್ಯ ಹೇಳಿಬಿಡಿ. ದುಡ್ಡನ್ನು ಬಿಡುಗಡೆ ಮಾಡಿಸೋಣ. ದುಡ್ಡು ಇದೆಯೇ ಹೇಳಿ. ಎಷ್ಟು ದುಡ್ಡು ಇದೆ ಹೇಳಿ. ಇಲ್ಲವೆಂದು ಹೇಳಿ. ಎಷ್ಟು ಕೋಟಿ ಇದೆ ನಿಮ್ಮ ಹತ್ತಿರ ಎಂದು ಹೇಳಿ ನೋಡೋಣ.

ಶ್ರೀ ಜಗದೀಶ್ ಶೆಟ್ಟರ್: ಅವರು ಉತ್ತರ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಪ್ರಸ್ತಾಪ ಮಾಡಿದ್ದಾರೆ.

SRI SIDDARAMAIAH: ದುಡ್ಡಿಲ್ಲ ಸ್ವಾಮಿ. Rural Development Department has no money. The Finance Department has not released the money.

ಶ್ರೀ ಡಿ.ಕೆ.ಶಿವಕುಮಾರ್: ಎಲ್ಲದಕ್ಕೂ ನಗುತ್ತೀರಲ್ಲಾ ನೀವು. ಅಯ್ಯೋ!

(ಗೊಂದಲ)

ಶ್ರೀ ಸಿದ್ದರಾಮಯ್ಯ: ದಯವಿಟ್ಟು ಅವರಿಗೆ ಹೇಳಿ. ಮಾನ್ಯ ಜಗದೀಶ್ ಶೆಟ್ಟರೇ, ನಾವು ನಿಮ್ಮ ಸಹಾಯಕ್ಕೆ ಬರುತ್ತಿದ್ದೇವೆ. ನೀವು ಏನು ನಮ್ಮ ಪರ ನಿಲ್ಲುವುದಿಲ್ಲವಲ್ಲಾ? ನಿಮಗೆ ದುಡ್ಡು ಬೇಕೋ ಬೇಡವೋ?

ಡಾ: ಹೆಚ್.ಸಿ.ಮಹದೇವಪ್ಪ: ಸರ್ priority drinking waterದು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಿಮಗೆ ದುಡ್ಡು ಬೇಕೋ ಅಥವಾ ಬೇಡವೋ ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಿಮಗೆ ಮರ್ಯಾದೆ ಕೊಡುತ್ತೇವೆ ರೀ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಿಮ್ಮ ಹತ್ತಿರ ದುಡ್ಡು ಇದೆಯೋ ಅಥವಾ ಇಲ್ಲವೋ ಹೇಳಿ. ನಮ್ಮ Chief Minister ಗೆ ಎಲ್ಲರೂ ಮರ್ಯಾದೆ ಕೊಡುತ್ತೇವೆ. ನಿಮ್ಮ ಹತ್ತಿರ ದುಡ್ಡಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪವಾಗುತ್ತಿದೆ. Regular ಆಗಿ ಚರ್ಚೆಯಾಗಲಿ. ಸರ್ಕಾರ ಉತ್ತರ ಕೊಡುತ್ತದೆ.

(ಗೊಂದಲ)

SRI SIDDARAMAIAH: This is not correct. ಕುಡಿಯುವ ನೀರಿಗೆ ಏನು ಮಾಡಬೇಕು ಜನ? ಎಲ್ಲಿ ಹೋಗಬೇಕು ಜನ?

(ಗೊಂದಲ)

ಅಧ್ಯಕ್ಷರು: ಈಗ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿ.....

ಶ್ರೀ ಸಿದ್ದರಾಮಯ್ಯ: ಈಗ ಜಾತ್ರೆಗಳು ಬರುತ್ತವೆ, ಹಬ್ಬಗಳು ಬರುತ್ತವೆ.

ಅಧ್ಯಕ್ಷರು: ಈಗ ಪ್ರಶ್ನೆ ಅದಲ್ಲ.

ಶ್ರೀ ಸಿದ್ದರಾಮಯ್ಯ: ಆಮೇಲೆ ಆ ನೀರು ಕುಡಿದು ರೋಗಗಳು ಬಂದುಬಿಡುತ್ತವೆ.

ಅಧ್ಯಕ್ಷರು: ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿ ಎಲ್ಲಾ ವಿವರ ಕೊಡಬೇಕು ಎಂದರೆ ಹೇಗೆ?

ಶ್ರೀ ಸಿದ್ದರಾಮಯ್ಯ: ಹಾಗಾದರೆ ಒಂದು ಬಹಳ important ವಿಚಾರವನ್ನು ನಿಮ್ಮ ಹತ್ತಿರ ಅನುಮತಿ ತೆಗೆದುಕೊಂಡು ಮಾತನಾಡಬಾರದೇ?

ನಿಮ್ಮ ಅನುಮತಿ ತೆಗೆದುಕೊಂಡೇ ನಾನು ಹೇಳುತ್ತಿದ್ದೇನೆ. With your permission I am mentioning all these points to help Mr.Jagadish Shetter in order to facilitate . . . . ಇವರು ದುಡ್ಡು ಕೊಟ್ಟಿಲ್ಲ. ಇವರಿಬ್ಬರ ಮಧ್ಯೆ ಏನೇನು ಕೋಪ ಇದೆಯೋ ನನಗೆ ಗೊತ್ತಿಲ್ಲ.

ಶ್ರೀ ಬಿ. ರಮಾನಾಥ್ ರೈ: Surplus water ಅನ್ನು ಮಾಡಬಹುದು. Surplus water ಕಾರ್ಯಕ್ರಮ ಮಾಡುತ್ತೇವೆ ಎಂದು ಹೇಳಿದ್ದಾರೆ. ಯಾವುದನ್ನೂ ಮಾಡಿಲ್ಲ.

(ಗೊಂದಲ)

ಶ್ರೀ ಯು.ಟಿ.ಖಾದರ್: Task force ಗೆ ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಇಲ್ಲಿ task ಇಲ್ಲ, force ಇಲ್ಲದಂತಾಗಿದೆ.

(ಗೊಂದಲ)

ಅಧ್ಯಕ್ಷರು: ಇದನ್ನು ಮುಕ್ತಾಯ ಮಾಡಿದೆ. ಕ್ರಿಕೆಟ್‌ಗೆ ಸಂಬಂಧಪಟ್ಟಿದ್ದು ಮಾತನಾಡಿ.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ: ದಯಮಾಡಿ. ನಮಗೆ ಬಾಯಾರಿಕೆ ಆಗುತ್ತೆ ನಮಗೆ.

(ಗೊಂದಲ)

ಅಧ್ಯಕ್ಷರು: ಬನ್ನಿ ನೀರು ಕೊಡುತ್ತೇನೆ. ಇಲ್ಲೇ ಇದೆ ನೀರು ಕೊಡುತ್ತೇನೆ.

ಶ್ರೀ ಬಿ.ರಮಾನಾಥ್ ರೈ: ನಮಗೆ ಬಾಯಾರಿಕೆ ಆಗುತ್ತೆ. ನೀವು ಯಾವುದೋ ನೀರು ಕುಡಿಯುತ್ತಿದ್ದೀರಿ. ಆದರೆ, ಅಲ್ಲಿ ಬಡವರು ಪಾಪ ನೀರು ಕುಡಿಯುತ್ತಿಲ್ಲ.

ಅಧ್ಯಕ್ಷರು: ನಿಮಗೆ beer ಕೊಡುತ್ತೇನೆ.

ಶ್ರೀ ಪಿ.ಎಂ.ಅಶೋಕ್: ಸ್ವಾಮಿ ಕ್ರಿಕೆಟ್ ಬಗ್ಗೆ ಶುರು ಮಾಡಿಸಿ.

(ಗೊಂದಲ)

ಶ್ರೀ ಖಮರುಲ್ಲಾ ಇಸ್ಲಾಂ: DC ಹತ್ತಿರ ದುಡ್ಡಿಲ್ಲ. CEO ಹತ್ತಿರ ದುಡ್ಡಿಲ್ಲ.

ಅಧ್ಯಕ್ಷರು: ಅಲ್ಲ ಅವರಿಗೆ beer ಕೊಡೋಣ. ರಮಾನಾಥ್ ರೈರವರಿಗೆ beer ಕೊಡುತ್ತೇನೆ!

ಶ್ರೀ ಖಮರುಲ್ಲಾ ಇಸ್ಲಾಂ: ನಾನು ನಮ್ಮ fundನಿಂದ ಮೂರು ಬೋರ್‌ವೆಲ್ ಕೊರೆಸಿದ್ದೇನೆ ಸಾರ್. ಏನು ಮಾಡುವುದು ಹೇಳಿ. DC ಕೊಡುತ್ತಿಲ್ಲ, CEO ಕೊಡುತ್ತಿಲ್ಲ.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ: ನಮ್ಮ ಜಿಲ್ಲೆ ಸಮಸ್ಯೆ. ಮಳೆ ಬಂದಿಲ್ಲ. ಪ್ರಕೃತಿ ವಿಕೋಪ .....

(ಗೊಂದಲ)

ಅಧ್ಯಕ್ಷರು: ನಾನು ಬೇರೆ ವಿಚಾರ ತೆಗೆದುಕೊಂಡಿದ್ದೇನೆ. Please ಹೀಗೆ ಎದ್ದು ನಿಂತುಕೊಂಡರೆ ಹೇಗೆ? ಅದನ್ನು ಮುಕ್ತಾಯ ಮಾಡಿದ್ದೇನೆ.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ: ಅತೀವೃಷ್ಟಿ ಬರುತ್ತದೆ, ಅನಾವೃಷ್ಟಿ ಬರುತ್ತದೆ. ಅತೀವೃಷ್ಟಿ ಬಂದ ತಕ್ಷಣ ಈಗ ಬರ ಬಂತು. ಈ ಬರ ಬಂದಾಗ ನಾವು.....

ಅಧ್ಯಕ್ಷರು: Please ತಾವು ಕುಳಿತುಕೊಳ್ಳಿ.

ಈ) ವಿಷಯ: ಕ್ರಿಕೆಟ್ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿರುವ ಹಾಗೂ ಲಾಠಿ ಚಾರ್ಜ್ ಮಾಡಿರುವ ಬಗ್ಗೆ

ಶ್ರೀ ಪಿ.ಎಂ.ಅಶೋಕ್ ಪಟ್ಟಣ (ರಾಮದುರ್ಗ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಒಂದು ಉತ್ತಮವಾದ ಅಸೋಸಿಯೇಷನ್ ಎಂದು ಆಗ ನಮ್ಮ ರಾಷ್ಟ್ರದಲ್ಲಿಯೇ ಹೆಸರುಗಳಿಸಿದೆ. ಆದರೆ, ಇತ್ತೀಚೆಗೆ ಏನೇನು ನಡೆಯುತ್ತಿದೆ ಎಂಬುದು ನಿಮಗೆಲ್ಲಾ ತಿಳಿದುಬಂದಿದೆ. ಈಗ ಕರ್ನಾಟಕ ಸರ್ಕಾರದವರು ಕೊಟ್ಟಿರುವ ಜಾಗದಲ್ಲಿ ಕ್ರಿಕೆಟ್ ಸ್ಟೇಡಿಯಂ ಕಟ್ಟಿದ್ದಾರೆ. KSCAಯಲ್ಲಿ ಹಲವಾರು ಗಣ್ಯರು ಶ್ರೀಮಾನ್ ಚೆನ್ನಸ್ವಾಮಿಯವರು, ತಿಪ್ಪಯ್ಯನವರು, ರಾಮಪ್ರಸಾದ್‌ರವರು, ಶ್ರೀಕಂಠದತ್ತ ನರಸಿಂಹರಾಜ ಒಡೆಯರು, ಸಿ.ನಾಗರಾಜು, ಬ್ರಿಜೇಷ್ ಪಟೇಲರವರು ಯಶಸ್ವಿಯಾಗಿ ಕಾರ್ಯಮಾಡಿದ್ದಾರೆ. ಆದರೆ, ಇಲ್ಲಿ ಯಾವ ತರಹ ನಡೆಯುತ್ತಿದೆ ಎಂದು ತಮಗೆಲ್ಲಾ ಗೊತ್ತಾಗಿದೆ. ನಮ್ಮ ದೇಶದ ಹಿರಿಮೆಯಾಗಿ 1970ರಲ್ಲಿ 11 ಜನರ ಪೈಕಿ 6 ಜನ ನಮ್ಮ ಕರ್ನಾಟಕ ರಾಜ್ಯದ ಆಟಗಾರರು ಟೆಸ್ಟ್ ಮ್ಯಾಚ್‌ನಲ್ಲಿ ಆಡಿದ್ದಾರೆ. ಜಿ.ಆರ್. ವಿಶ್ವನಾಥ್, ಸಯ್ಯದ್ ಕಿರ್ಮಾನಿ, ಬಿ.ಎಸ್. ಚಂದ್ರಶೇಖರ್ ಪ್ರಸನ್ನ, ಬ್ರಿಜೇಷ್ ಪಟೇಲ್, ಸುಧಾಕರ್ ಅಂತಹ ನಮ್ಮ ರಾಜ್ಯದ ತಂಡ ಬಹಳ powerful ಆಗಿತ್ತು. ಆದರೆ, ಇವತ್ತಿನ ದಿನ